# ಕರ್ನಾಟಕ ಸರ್ಕಾರ

ಸಂಖ್ಯೆ: ಆರ್‌ಡಿ 69 ಎಲ್‌ಜಿಪಿ 2015

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:01.12.2015

## ಸುತ್ತೋಲೆ

ವಿಷಯ: ವಿದ್ಯುತ್ ಹಾಗೂ ಸೌರ ವಿದ್ಯುತ್ ಯೋಜನೆಗಳ ಉದ್ದೇಶಕ್ಕಾಗಿ ಬಳಸುವ ಭೂಮಿಯ ಪರಿಭಾವಿತ ಭೂ ಪರಿವರ್ತನೆ (Deemed Conversion) ಕುರಿತಂತೆ ಸೂಚನೆ.

ಉಲ್ಲೇಖ: 1. ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಪ್ರಕರಣ 95ರ ಉಪ ಪ್ರಕರಣ 8 ಹಾಗೂ 10.

2. ಕರ್ನಾಟಕ ಕೈಗಾರಿಕಾ ನೀತಿ, 2014-19 ಹಾಗೂ ಕರ್ನಾಟಕ ಸೌರ ನೀತಿ 2014-21

*****

ಕರ್ನಾಟಕ ಕೈಗಾರಿಕಾ ನೀತಿ 2014-19ರನ್ವಯ, ರಾಜ್ಯದಲ್ಲಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಿ, ಪ್ರೋತ್ಸಾಹಿಸಲು ಅನೇಕ ರಿಯಾಯಿತಿಗಳನ್ನು ಪ್ರಕಟಿಸಲಾಗಿದೆ. ನವೀಕೃತ ಇಂಧನ ಯೋಜನೆಗಳೂ ಸೇರಿದಂತೆ ಎಲ್ಲಾ ವಿದ್ಯುತ್ ಯೋಜನೆಗಳನ್ನು ಅಭಿವೃದ್ಧಿಪಡಿಸಿ, ಪ್ರೋತ್ಸಾಹಿಸುವ ಉದ್ದೇಶದಿಂದ ವಿದ್ಯುತ್ ಯೋಜನೆಗಳನ್ನು ಉತ್ಪಾದನಾ ಕೈಗಾರಿಕೆಗಳೆಂದು ಸೆಕ್ಷನ್ 5.10 ರಲ್ಲಿ ಪರಿಗಣಿಸಲಾಗಿದ್ದು, ವಿದ್ಯುತ್ ಯೋಜನೆಗಳಿಗೆ ಬೇಕಾಗುವ ಭೂಮಿಯ ಖರೀದಿ ಮತ್ತು ಪರಿವರ್ತನಾ ವಿಧಾನಗಳನ್ನು ಸರಳೀಕೃತಗೊಳಿಸಲು ಪ್ರಸ್ತಾಪಿಸಲಾಗಿದೆ.

ಅದರಂತೆ, ಉಲ್ಲೇಖ (1) ರಲ್ಲಿ ತಿಳಿಸಿರುವಂತೆ, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಪ್ರಕರಣ 95ಕ್ಕೆ ತಿದ್ದುಪಡಿ ತರಲಾಗಿದ್ದು, ವ್ಯವಸಾಯ/ಕೃಷಿ ಭೂಮಿಯನ್ನು ಕೈಗಾರಿಕಾ ಅಭಿವೃದ್ಧಿಗಾಗಿ ಕರ್ನಾಟಕ ಭೂ ಸುಧಾರಣಾ ಅಧಿನಿಯಮ, 1961ರ ಪ್ರಕರಣ 109 ರ ಪ್ರಕಾರ, ಅನುಮತಿಯನ್ನು ಪಡೆದು ಖರೀದಿಸಿ, ನಿಗದಿತ ಪರಿವರ್ತನಾ ಶುಲ್ಕ ಪಾವತಿ ಮಾಡಿದಲ್ಲಿ ಪರಿಭಾವಿತ ಭೂ ಪರಿವರ್ತನೆ (Deemed Conversion) ಎಂದು ಪರಿಗಣಿಸಬಹುದೆಂದು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಪ್ರಕರಣ 95ರ ಉಪ-ಪ್ರಕರಣ 8 ರಲ್ಲಿ ಅವಕಾಶವನ್ನು ಕಲ್ಪಿಸಿಕೊಳ್ಳಲಾಗಿದೆ.

ಅದರಂತೆ, ವಿದ್ಯುತ್ ಉತ್ಪಾದನಾ ಯೋಜನೆಗಳನ್ನು ಉತ್ಪಾದನಾ ಕೈಗಾರಿಕಾ ಯೋಜನೆಗಳೆಂದು ಪರಿಗಣಿಸಿರುವುದರಿಂದ ಯೋಜನೆಗಳಿಗೆ ಬೇಕಾಗುವ ವ್ಯವಸಾಯ/ಕೃಷಿ ಭೂಮಿಯನ್ನು ಕರ್ನಾಟಕ ಭೂ ಸುಧಾರಣಾ ಅಧಿನಿಯಮ, 1961ರ ಪ್ರಕರಣ 109 ರ ಪ್ರಕಾರ ಅನುಮತಿಯನ್ನು ಪಡೆದು ಖರೀದಿಸಿದ್ದಲ್ಲಿ, ಪರಿಭಾವಿತ ಭೂ ಪರಿವರ್ತನೆಯೆಂದು ಪರಿಗಣಿಸಬಹುದಾಗಿದೆ. ಸರ್ಕಾರವು ನೀಡಿರುವ ಅನುಮತಿ ಆಧಾರದಂತೆ, ಜಿಲ್ಲಾಧಿಕಾರಿಯವರು ಯೋಜನಾ ಪ್ರತಿಪಾದಕರ ಕೋರಿಕೆ ಅರ್ಜಿಗಳನ್ನು ಕರ್ನಾಟಕ ಭೂ ಸುಧಾರಣಾ ಅಧಿನಿಯಮ, 1961ರ ಪ್ರಕರಣ 109ರನ್ವಯ ವ್ಯವಸಾಯ/ ಕೃಷಿ ಭೂಮಿಯನ್ನು ಖರೀದಿಸಲು ಪರಿಗಣಿಸಬೇಕು ಮತ್ತು ಪರಿಭಾವಿತ ಭೂ ಪರಿವರ್ತನೆ ಉದ್ದೇಶಕ್ಕಾಗಿ ಕೆಳಕಂಡ ದಾಖಲೆಗಳನ್ನು ಪಡೆಯಬೇಕು.

1. ವಿದ್ಯುತ್ ಉತ್ಪಾದನಾ ಯೋಜನೆಗಳನ್ನು ಸ್ಥಾಪಿಸಬೇಕಾದಲ್ಲಿ, ಸರ್ಕಾರದಿಂದ ಅಗತ್ಯ ಅನುಮತಿ ಪಡೆದಿರುವುದಕ್ಕೆ ವಿದ್ಯುತ್ ಯೋಜನೆಯ ಅನುಮತಿ/ ಮಂಜೂರಾತಿ ಪತ್ರ

2. ವ್ಯವಸಾಯ ಭೂಮಿಯನ್ನು ಖರೀದಿಸಲು ಕರ್ನಾಟಕ ಭೂ ಸುಧಾರಣಾ ಅಧಿನಿಯಮ, 1961ರ ಪ್ರಕರಣ 109 ರ ಪ್ರಕಾರ ಅನುಮತಿ ಪತ್ರ ಹಾಗೂ ಖರೀದಿಸಿರುವ ಬಗ್ಗೆ ದಾಖಲೆ.

3. ಪಿ.ಟಿ.ಸಿ.ಎಲ್ ಹಾಗೂ ಭೂ ಸ್ವಾಧೀನ ಕಾಯ್ದೆ ವ್ಯಾಪ್ತಿಗೆ ಒಳಪಡದೆ ಇರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು,

4. ಭೂ ಮಂಜೂರಾತಿ ಷರತ್ತುಗಳು ಉಲ್ಲಂಘನೆಯಾಗದಿರುವ ಬಗ್ಗೆ ಸಹ ಖಚಿತಪಡಿಸಿಕೊಳ್ಳತಕ್ಕದ್ದು.

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಪ್ರಕರಣ 95ಕ್ಕೆ ಉಪ ಪ್ರಕರಣ 10ನ್ನು ಹೊಸದಾಗಿ ಸೇರಿಸಿದ್ದು ಅದರಂತೆ ವ್ಯವಸಾಯ ಭೂಮಿ ಹೊಂದಿರುವ ಯಾವುದೇ ವ್ಯಕ್ತಿಯು ಭೂಮಿಯನ್ನು ಕರ್ನಾಟಕ ಸೌರನೀತಿ 2014-2021 ರನ್ವಯ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ಸಮರ್ಥ ಪ್ರಾಧಿಕಾರದ ಅನುಮತಿ ಪಡೆದು ಸೌರ ವಿದ್ಯುತ್ ಉತ್ಪಾದನಾ ಯೋಜನೆಯನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಬಳಸಲು ಅಪೇಕ್ಷಿಸಿ, ಪರಿವರ್ತನಾ ಹಾಗೂ ಇತರೆ ಶುಲ್ಕ ಪಾವತಿಯೊಡನೆ ಭೂ-ಪರಿವರ್ತನೆಗೆ ಅರ್ಜಿ ಸಲ್ಲಿಸಿದಲ್ಲಿ, ಅಂತಹ ಭೂ-ಪರಿವರ್ತನೆಯನ್ನು ಪರಿಭಾವಿತ ಭೂ ಪರಿವರ್ತನೆಯೆಂದು ಪರಿಗಣಿಸಬೇಕಾಗಿದೆ. ಈ ಉದ್ದೇಶಕ್ಕಾಗಿ ಈ ಕೆಳಕಂಡ ದಾಖಲೆಗಳನ್ನು ಪಡೆಯುವುದು.

1. ಸರ್ಕಾರ /ಕ್ರೆಡಲ್ ರವರಿಂದ ಸೌರ ವಿದ್ಯುತ್ ಉತ್ಪಾದನಾ ಯೋಜನೆಗೆ ಅನುಮತಿ /ಮಂಜೂರಾತಿ ಪತ್ರ.

2. ಅರ್ಜಿದಾರರ ಹೆಸರಿನಲ್ಲಿರುವ ಆರ್‌ಟಿಸಿ ( ಪಹಣಿ ಪತ್ರ)

3. ಪಿ.ಟಿ.ಸಿ.ಎಲ್ ಹಾಗೂ ಭೂ ಸ್ವಾಧೀನ ಕಾಯ್ದೆ ವ್ಯಾಪ್ತಿಗೆ ಒಳಪಡದೆ ಇರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು,

4. ಭೂ ಮಂಜೂರಾತಿ ಷರತ್ತುಗಳು ಉಲ್ಲಂಘನೆಯಾಗದಿರುವ ಬಗ್ಗೆ ಸಹ ಖಚಿತಪಡಿಸಿಕೊಳ್ಳತಕ್ಕದ್ದು.

ಮೇಲೆ ತಿಳಿಸಿರುವ ದಾಖಲಾತಿಗಳನ್ನು ಪಡೆದ ನಂತರ ಜಿಲ್ಲಾಧಿಕಾರಿಗಳು ವ್ಯವಸಾಯ ಭೂಮಿಯನ್ನು ವ್ಯವಸಾಯೇತರ ಭೂಮಿಯನ್ನಾಗಿ ಪರಿಭಾವಿತ ಭೂ ಪರಿವರ್ತನೆ ಹೊಂದಲು ನಿರ್ದಿಷ್ಟಪಡಿಸಿರುವ ಭೂ ಪರಿವರ್ತನಾ ಶುಲ್ಕ / ದಂಡ ಪಾವತಿಸಿಕೊಂಡು 15 ದಿನಗಳೊಳಗಾಗಿ ಪರಿಭಾವಿತ ಭೂ ಪರಿವರ್ತನೆ ಆದೇಶದ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದು.

**(ಉಮಾದೇವಿ)**
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂ ಮಂಜೂರಾತಿ-1)

1. ಎಲ್ಲಾ ಪ್ರಾದೇಶಿಕ ಆಯುಕ್ತರು.
2. ಎಲ್ಲಾ ಜಿಲ್ಲಾಧಿಕಾರಿಗಳು.
3. ಎಲ್ಲಾ ಉಪವಿಭಾಗಾಧಿಕಾರಿಗಳು.
4. ಎಲ್ಲಾ ತಹಶೀಲ್ದಾರರುಗಳು

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಮಾನ್ಯ ಇಂಧನ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
3. ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ, ಬೆಂಗಳೂರು.